ಪ್ರಾರಂಭಿಸಲು ಸಿದ್ಧತೆಗಳನ್ನು ಮಾಡಿಕೊಂಡಿದೆ. 2002-03ನೇ ಸಾಲಿನ ಕಬ್ಬಿನ ದರವನ್ನು ನಿಗದಿ ಪಡಿಸುವುದರ ಬಗ್ಗೆ ಈಗಾಗಲೇ ರೈತ ಪ್ರತಿನಿಧಿಗಳೊಡನೆ ಚರ್ಚಿಸಲಾಗಿದೆ. ಈ ಬಗ್ಗೆ ಕಂಪನಿ ಅಧ್ಯಕ್ಷರು ಮತ್ತು ಮಂಡ್ಯ ಜಿಲ್ಲೆ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿದ್ದಾರೆ. ದಿನಾಂಕ 16.7.02 ರಂದು ಸಂಜೆ 6 ಗಂಟೆಗೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷತೆಯಲ್ಲಿ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು ಮತ್ತು ರೈತ ಮುಖಂಡರೊಡನೆ ಸಭೆಯನ್ನು ನಡೆಸಿ ಕಬ್ಬಿನ ದರ ಹಾಗೂ ಕಬ್ಬು ಅರೆಯುವ ಹಂಗಾಮವನ್ನು ಪ್ರಾರಂಭಿಸುವ ದಿನಾಂಕದ ಬಗ್ಗೆ ಕ್ರಮ ಕೈಗೊಳ್ಳಲಿದ್ದಾರೆ. ಈಗಾಗಲೇ ರೈತ ಪ್ರತಿನಿಧಿಗಳೊಡನೆ ಚರ್ಚಿಸಿದಾಗ ಕಂಪನಿಯು ಈ ಸಾಲಿನ ಅರೆಯುವುದನ್ನು ಅಂದಾಜು 24.7.2002ರಲ್ಲಿ ಪ್ರಾರಂಭಿಸುವುದೆಂದು ತಿಳಿಸಲಾಗಿದೆ. ಅದರಂತೆ ಕಬ್ಬಿನ ದರ ನಿಗದಿ ಮಾಡಿ ಕಾರ್ಖಾನೆಯನ್ನು ಆದಷ್ಟು ಬೇಗ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಈ) ಕರ್ನಾಟಕದಲ್ಲಿ ಚಲನ ಚಿತ್ರ ಉದ್ಯಮ ಸ್ಥಗಿತಗೊಂಡಿರುವ ಬಗ್ಗೆ

ಶ್ರೀ ಕೆ. ಶ್ರೀನಿವಾಸಗೌಡ ಕುಡುವನ ಹಳ್ಳಿ (ಕೋಲಾರ) :- ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕಡೆಗೆ ಗಮನಹರಿಸಬೇಕು. ಇವತ್ತು ಕರ್ನಾಟಕದಲ್ಲಿ ಚಲನಚಿತ್ರ ಉದ್ಯಮ ಸ್ಥಗಿತವಾಗಿದೆ. ಇವತ್ತು ಚಲನಚಿತ್ರ ಮಂದಿರಗಳು ಅವರ ರೇಟ್ ನ್ನು ಜಾಸ್ತಿ ಮಾಡಿದ್ದರಿಂದ ಇದಕ್ಕೆ ಸಂಬಂಧ ಪಟ್ಟಂತೆ ಉದ್ಯಮದ ಎಲ್ಲಾ ಕಾರ್ಯಚಟುವಟಿಕೆಗಳು ಅದು ಶೂಟಿಂಗ್ ಇರಬಹುದು, ಮತ್ತೊಂದು ಮಗದೊಂದು ಎಲ್ಲವೂ ಸ್ಥಗಿತವಾಗಿದೆ ಮತ್ತು ಚಿತ್ರಪ್ರದರ್ಶನ ಕೂಡ ಸ್ಥಗಿತವಾಗಿದೆ. ಇದರಿಂದ ಸರ್ಕಾರಕ್ಕೆ ಬರುವಂಥ ತೆರಿಗೆ ಬಾರದಾಗಿ ಆಗುತ್ತಿದೆ ಮತ್ತು ಸರ್ಕಾರಕ್ಕೆ ನಷ್ಟ ಕೂಡ ಆಗುತ್ತಿದೆ. ಸರ್ಕಾರಕ್ಕೆ ಬರಬೇಕಾದ ಮನರಂಜನೆ ತೆರಿಗೆ ಬರುತ್ತಿಲ್ಲ. ಇದರ ಜತೆಗೆ ಕಾರ್ಮಿಕರಿಗೆ ಕೂಡ ಕೆಲಸ ಇಲ್ಲದಹಾಗೆ ಆಗುತ್ತಿದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು, ದಯವಿಟ್ಟು ಇದರಲ್ಲಿ ಇಂಟರ್‌ವೀನ್ ಆಗಿ ಉಂಟಾಗಿರುವ ಸಮಸ್ಯೆಯನ್ನು ಬಗೆಹರಿಸಬೇಕು. ಅಲ್ಲಿ ಈಗ ಮೆರವಣಿಗೆ ಆಗುತ್ತಿದೆ. ಲಾ ಅಂಡ್ ಆರ್ಡರ್ ಪರಿಸ್ಥಿತಿ ಕೂಡ ಬೆಂಗಳೂರಿನಲ್ಲಿ ಹೆಚ್ಚು ಕಡಿಮೆ ಆಗುವಂಥ ಸಂದರ್ಭ ಕೂಡ ಇದೆ. ಏಕೆಂದರೆ ತಮಗೆ ಗೊತ್ತಿದೆ, ಇವತ್ತು ಚಿತ್ರಮಂದಿರಗಳಲ್ಲಿ ಏನಾದರೂ ವ್ಯತ್ಯಾಸ ಆದರೆ ಲಾ ಅಂಡ್ ಆರ್ಡರ್ ಪರಿಸ್ಥಿತಿ ಕೂಡ ನಮ್ಮ ಕೈತಪ್ಪುತ್ತದೆ. ಆದ್ದರಿಂದ ಬೇಗನೆ ಈ ವಿಚಾರದಲ್ಲಿ ಸರ್ಕಾರ ಆದರಲ್ಲೂ ಮಾನ್ಯ ಮುಖ್ಯಮಂತ್ರಿಗಳು ಮಧ್ಯಪ್ರವೇಶ ಮಾಡಿ ಅವರಿಬ್ಬರನ್ನೂ ಒಡಂಬಡಿಕೆ ಮಾಡಿಸಿ ಏನು ಎಲ್ಲವೂ ಸ್ಥಗಿತಗೊಂಡಿದೆ ಅದನ್ನು ಶುರು ಮಾಡಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನೂ ಕೂಡ ನೋಟೀಸ್ ಕಳುಹಿಸಿದ್ದೆ. ಇಲ್ಲಿ ಇವತ್ತಿನಿಂದ ಒಂದು ಧರಣಿ ಸತ್ಯಾಗ್ರಹ ಪ್ರಾರಂಭವಾಗಿದೆ. ಮುಖ್ಯವಾಗಿ ಅವರದ್ದು ಬೇಡಿಕೆ ಏನೆಂದರೆ ಕೆಂಪೇಗೌಡ ರಸ್ತೆ ಏನಿದೆ, ಅಲ್ಲಿಯ ಕೆಂಪೇಗೌಡ ವೃತ್ತದ ಸುತ್ತಮುತ್ತ ಇರುವಂಥ ಏಳೆಂಟು ಚಲನ ಚಿತ್ರ ಮಂದಿರಗಳು

ಪ್ರಮುಖವಾಗಿದೆ. ಇಡೀ ರಾಜ್ಯದ ಜನತೆ ಅಲ್ಲಿ ಬರುವಂಥಾದ್ದು ಮತ್ತು ಅಲ್ಲಿ ಫ್ಲೋಟಿಂಗ್ ಪಾಪ್ಯುಲೇಷನ್ ಸದಾ ಇರುವಂಥಾದ್ದು. ಹೀಗಾಗಿ ಇಲ್ಲಿ ಏಳೆಂಟು ಚಲನಚಿತ್ರ ಮಂದಿರಗಳು ಏನಿದೆ ಅಲ್ಲಿ ಕನ್ನಡ ಚಲನಚಿತ್ರಗಳು ಕಡ್ಡಾಯವಾಗಿ ಪ್ರದರ್ಶನ ಆಗಬೇಕು ಎನ್ನುವಂಥಾದ್ದು ಒಂದು ಬೇಡಿಕೆಯನ್ನು ಪ್ರಮುಖವಾಗಿ ಅವರು ಇಟ್ಟಿದ್ದಾರೆ. ಕನ್ನಡ ಚಲನಚಿತ್ರಗಳು ಚೆನ್ನಾಗಿ ನಡೆಯುವಂಥ ಸಂದರ್ಭದಲ್ಲಿ ಹಿಂದಿ ಅಥವಾ ಬೇರೆ ಭಾಷೆಯ ಚಲನಚಿತ್ರಗಳನ್ನು ವಿತರಕರ ಒತ್ತಡಕ್ಕೆ ಮಣಿದು ಅಥವಾ ಹೆಚ್ಚಿನ ಹಣದ ಆಸೆಗಾಗಿ ಪ್ರದರ್ಶಿಸಿ ಆ ಚಲನಚಿತ್ರ ಮಂದಿರಗಳ ಮಾಲೀಕರು ಕನ್ನಡ ಚಲನಚಿತ್ರಗಳ ಪ್ರದರ್ಶನವನ್ನು ಸ್ಥಗಿತ ಮಾಡುವಂಥಾದ್ದನ್ನು ಸಾಕಷ್ಟು ಸಲ ನಾವು ನೋಡಿದ್ದೇವೆ. ಹೀಗಾಗಿ ಕನ್ನಡ ಚಲನಚಿತ್ರದ ನಿರ್ಮಾಪಕರಿಗೆ ಮತ್ತು ಕಲಾವಿದರಿಗೆ ನಮ್ಮ ಕಾರ್ಮಿಕರಿಗೆ ಈ ರಾಜ್ಯದಲ್ಲಿದ್ದಂತಹವರಿಗೆ ಇದರಿಂದ ಬಹಳಷ್ಟು ತೊಂದರೆ ಮತ್ತು ಹಾನಿಯಾಗುತ್ತದೆ. ಇದೇ ರೀತಿ ಧರಣಿ ಸತ್ಯಾಗ್ರಹ ಮುಂದುವರಿದರೆ ಇದರಿಂದ ಕಾರ್ಮಿಕರಿಗೂ ತೊಂದರೆ ಮತ್ತು ಅದರ ಮೇಲೆ ಡಿಪೆಂಡ್ ಅದಂತಹ ಲಕ್ಷಾಂತರ ಜನರಿಗೆ ಇದರ ಪರಿಣಾಮವಾಗಲಿಕ್ಕೆ ಸಾಧ್ಯತೆ ಇದೆ ಮತ್ತು ಕಾನೂನು ಸುವ್ಯವಸ್ಥೆ ಹದಗೆಡುವಂತಹ ಸಂಭವವಿದೆ. ಆದ್ದರಿಂದ ಸರ್ಕಾರ ದಯವಿಟ್ಟು ತಕ್ಷಣವೇ ಇಂಟರ್‌ವಿನ್ ಆಗಿ ಇದರ ಬಗ್ಗೆ ಅವರ ಬೇಡಿಕೆಗಳು ಏನು ಎಂದು ಕೇಳಿಕೊಂಡು ಒಂದು ಪರಿಹಾರವನ್ನು ಹುಡಕಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾಹಿತಿಯನ್ನು ತರಿಸಿ ಕೊಡುತ್ತೇನೆ.

(ಉ) ಶ್ರೀ ಜಗದೀಶ್ ಎಂಬ ದಲಿತ ವರ್ಗಕ್ಕೆ ಸೇರಿದ ಕ್ರಿಕೆಟ್ ಆಟಗಾರರಿಗೆ ಪೊಲೀಸರಿಂದ ಕಿರುಕುಳ

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ಒಂದು ಪೊಲೀಸ್ ಸ್ಟೇಷನ್‌ನಲ್ಲಿ ನಮ್ಮ ಒಬ್ಬ ತರುಣ ಕ್ರಿಕೆಟ್ ಆಟಗಾರ, ಅವನು ದಲಿತ ವರ್ಗಕ್ಕೆ ಸೇರಿದ್ದಾನೆ ; ಅವನನ್ನು ಪೊಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ, ವಿನಾಕಾರಣ ಅವನು ಪೊಲೀಸ್ ದೌರ್ಜನ್ಯಕ್ಕೆ ಒಳಗಾಗಿರತಕ್ಕಂಥ ಒಂದು ವಿಚಾರ ಈಗಾಗಲೇ ಮಾನ್ಯ ಮಂತ್ರಿಗಳ ಗಮನಕ್ಕೂ ಬಂದಿರಬಹುದು. ಆ ವ್ಯಕ್ತಿಯ ಹೆಸರು ಜಗದೀಶ್ ಅಂತ. ಅವನು ಒಬ್ಬ ಪ್ರತಿಭಾವಂತ ಕ್ರಿಕೆಟ್ ಆಟಗಾರನಾಗಿ ಹೊರ ಹೊಮ್ಮತಕ್ಕಂಥ ಅವಕಾಶ ಇತ್ತು. ಅವನ ಒಂದು ಪ್ರತಿಭೆಗೆ ತಣ್ಣೀರು ಎರಚತಕ್ಕಂಥ ಒಂದು ಮನಸ್ಸಿನಿಂದ ಅವನ ಮೇಲೆ 4-5 ಕೇಸ್‌ಗಳನ್ನು ಹಾಕಿ, ಕಲ್ಕತ್ತಾಕ್ಕೆ ಹೋಗಬೇಕಾದಂತಹ ಒಂದು ಸಂದರ್ಭದಲ್ಲೂ ಹೊಡೆದು ಅವನ ಮೇಲೆ ಕೇಸ್‌ಗಳನ್ನು ಹಾಕಿ ಅವನು ಈಗ ಆಸ್ಪತ್ರೆಗೆ ಸೇರಿದ್ದಾನೆ. ಅವನ ಮರ್ಮಾಂಗದ ಮೇಲೆ ಏಟು ಹೊಡೆದಿದ್ದಾರೆ. ಅವನು ಇಲ್ಲಿಗೆ ಬಂದು ಶ್ರೀ ಸುಭಾಷ್ ಭರಣಿ, ಎ.ಡಿ.ಜಿ ಯವರನ್ನು ಉನ್ನತ ಪೊಲೀಸ್ ಅಧಿಕಾರಿಗಳನ್ನು ನೋಡಿದ್ದಾನೆ. ಅವರು ಅಲ್ಲಿನ ಎಸ್.ಪಿ ಮತ್ತು ಬೇರೆಯವರಿಗೆ ಸೂಚನೆ ಕೊಟ್ಟು ಇವರಿಗೆ ರಕ್ಷಣೆ ಕೊಡಬೇಕು, ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ ಮೇಲೆ ಅವನ ಅಣ್ಣ ತಮ್ಮನನ್ನು ನೋಡಿಕೊಂಡು ಮತ್ತೆ ವಾಪಸ್ಸು